ಓ.ಎಸ್. ನಂಬರಃ 6/2021

**ಡಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/10/2024 )**

**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ಸಾಕ್ಷಿಗೆ ಒಂದು ಫೋಟೊ ತೋರಿಸಲಾಗಿ ಅದು ದಾವಾ ಕಟ್ಟಡ ಎಂದು ಕೇಳಿದಾಗ ಸಾಕ್ಷಿಯು ಸದ್ರಿ ಫೋಟೊ ನೋಡಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಸದ್ರಿ ಫೋಟೊವನ್ನು ನಿಪಿ-22 ಎಂದು ಗುರುತಿಸಲಾಯಿತು. ದಾವಾ ಕಟ್ಟಡವು ವಾಣಿಜ್ಯ ಮಳಿಗೆಯಲ್ಲಿರುವ ಒಂದು ಕಟ್ಟಡ ಎಂದರೆ ಹೌದು. ದಾವಾ ಕಟ್ಟಡ ಇರುವಂತಹ ಕಟ್ಟಡ ಮಳಿಗೆಯು ಮೊದಲು ಜೆಫ್ರಿ ಕಾಂಪ್ಲೆಕ್ಸ್ ಆಗಿತ್ತು ಎಂದರೆ ಸಾಕ್ಷಿಯು ಹೌದು. ಈಗಲೂ ಅದೇ ಹೆಸರು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಈಗ ಸದ್ರಿ ಕಾಂಪ್ಲೆಕ್ಸ್ ಗೆ ವಾದಿಯ ಸೊಸೈಟಿಯ ಹೆಸರು ಇರುತ್ತದೆ ಎಂದರೆ ಸಾಕ್ಷಿಯು ಅವರು ಹಾಗೇ ಹಾಕಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ವಾದಿಯವರು ದಾವಾ ಕಟ್ಟಡವನ್ನು ಖರೀದಿ ಮಾಡಿದ ನಂತರ ಹೆಸರು ಹಾಕಿರುತ್ತಾರೆ ಎಂದರೆ

ಆ ಬಗ್ಗೆ ನನಗೆ ಗೊತ್ತಿಲ್ಲ. ಈಗ ದಾವಾ ಕಟ್ಟಡ ಇರುವ ಕಾಂಪ್ಲೆಕ್ಸ್ ನ ಹೆಸರು ಜೆಫ್ರಿ ಕಾಂಪ್ಲೆಕ್ಸ್ ಎಂದು ಇರುವುದಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ಆದರೆ ವಾದಿ ಸೊಸೈಟಿಯ ಹೆಸರಿರುವ ಬೋರ್ಡನ್ನು ತೆಗೆದರೆ ಅದರ ಅಡಿಯಲ್ಲಿ ಜೆಫ್ರಿ ಕಾಂಪ್ಲೆಕ್ಸ್ ಎಂದು ಇರುತ್ತದೆ ಎಂದು ಹೇಳಿರುತ್ತಾರೆ.

2. ಮಹಮ್ಮದ ಜೆಫ್ರಿಯವರ ವಿರುದ್ಧ ಅಸಲು ದಾವೆ ಸಂಖ್ಯೆ 33/2021 ರಂತೆ ದಾವೆ ದಾಖಲಿಸಿರುತ್ತೇನೆ ಎಂದರೆ ಹೌದು. ಸದ್ರಿ ದಾವೆಯನ್ನು ಯಾವ ಕಾರಣಕ್ಕಾಗಿ ಮಹಮ್ಮದ ಜೆಫ್ರಿಯವರ ವಿರುದ್ಧ ದಾಖಲಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಕಟ್ಟಡವನ್ನು ನಮಗೆ ಗೊತ್ತಿಲ್ಲದ ಹಾಗೆ ಬೇರೆಯವರಿಗೆ ಮಾರಾಟ ಮಾಡಬಾರದು ಎಂದು ಕೇಳಿ ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ದಾವಾ ಕಟ್ಟಡವನ್ನು ವಾದಿಯವರು ಮಹಮ್ಮದ ಜೆಫ್ರಿಯವರಿಂದ ಖರೀದಿ ಮಾಡಿದ್ದಾರೆಂದರೆ ಸಾಕ್ಷಿಯು ಆ ಬಗ್ಗೆ ಮಹಮ್ಮದ ಜೆಫ್ರಿ ಯವರು ನಮಗೆ ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಇವತ್ತಿನವರೆಗೆ ಆ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರ ತಯಾರಿಸುವಾಗ ನನ್ನ ವಕೀಲರಿಗೆ ವಾದಿಯವರು ದಾವಾ ಕಟ್ಟಡವನ್ನು ಖರೀದಿ ಮಾಡಿರುವ ಕ್ರಯಪತ್ರದ ಬಗ್ಗೆ ಮಾಹಿತಿ ಮತ್ತು ದಾಖಲೆಯನ್ನು ನಾನು ನೀಡಿರುವುದಿಲ್ಲ. ವಾದಿಯವರು ಮಹಮ್ಮದ ಜೆಫ್ರಿಯವರಿಂದ ದಾವಾ ಕಟ್ಟಡವನ್ನು ಖರೀದಿ ಮಾಡಿದ ಬಗ್ಗೆ ಇವತ್ತಿನವರೆಗೆ ನನಗೆ ಯಾವುದೇ ಮಾಹಿತಿ ಇಲ್ಲ.

3. ಮಹಮ್ಮದ ಜೆಫ್ರಿಯವರು ದಾವಾ ಕಟ್ಟಡದಿಂದ ನನ್ನನ್ನು ಎಬ್ಬಿಸಲು ಇಲ್ಲಿಯವರೆಗೆ ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಅಸಲು ದಾವೆ ಸಂಖ್ಯೆ 33/2021 ರಲ್ಲಿ ಮಹಮ್ಮದ ಜೆಫ್ರಿಯವರು ದಾವಾ ಕಟ್ಟಡದಿಂದ ನನ್ನನ್ನು ಎಬ್ಬಿಸಲು ಪ್ರಯತ್ನಿಸಿರುತ್ತಾರೆಂದು ನಾನು ಹೇಳಿರುವುದಿಲ್ಲ. ಸದ್ರಿ ದಾವೆಯಲ್ಲಿ ಮಹಮ್ಮದ ಜೆಫ್ರಿಯವರು ಹಾಜರಾಗಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈ ದಾವೆಗೆ ಪೂರಕವಾಗಲಿ ಎಂದು ದಾಖಲೆಗಳನ್ನು ಸೃಷ್ಠಿ ಮಾಡುವುದಕ್ಕೋಸ್ಕರ ಅಸಲು ದಾವೆ ಸಂಖ್ಯೆ 33/2021 ನ್ನು ದಾಖಲಿಸಿರುತ್ತೇನೆ ಎಂದರೆ ಗೊತ್ತಿಲ್ಲ. ಸದ್ರಿ ದಾವೆಯಲ್ಲಿ ದಾವಾ ಕಟ್ಟಡದ ನಿಜವಾದ ವರ್ಣನೆಯನ್ನು ಮುಚ್ಚಿಟ್ಟು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-9 ದಾಖಲೆಯಲ್ಲಿರುವ ಪರಿಶಿಷ್ಟದಲ್ಲಿ ಎಷ್ಟು ಕ್ಷೇತ್ರದಲ್ಲಿ

ದಾವಾ ಕಟ್ಟಡ ಇದೆ ಎಂದು ಕಾಣಿಸಿರುವುದಿಲ್ಲ ಎಂದರೆ ಹೌದು. ನಿಪಿ–22 ಫೋಟೊದಲ್ಲಿ ಕಂಡುಬರುವ ದಾವಾ ಕಟ್ಟಡ ಇರುವ ಕಾಂಪ್ಲೆಕ್ಸ್ ನಿಂದ ರಸ್ತೆಗೆ ಅಂದಾಜು 8–10 ಫೂಟ್ ಅಂತರ ಇರುತ್ತದೆ. ದಾವಾ ಕಟ್ಟಡ ಇರುವ ಕಾಂಪ್ಲೆಕ್ಸ್ ನಿಂದ ಇರುವ ರಸ್ತೆಗೆ 15 ಫೂಟ್ ಅಂತರ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ, 10 ಫೂಟ್ ಅಂತರ ಇರುತ್ತದೆ ನನ್ನ ಪಕ್ಕದ ಕಟ್ಟಡದವರಿಗೆ 15 ಫೋಟ್ ಅಂತರ ಇರಬಹುದು ಎಂದು ಉತ್ತರಿಸಿರುತ್ತಾರೆ. ದಾವಾ ಕಟ್ಟಡದ ಪೂರ್ವದಲ್ಲಿ ಒಂದು ರಸ್ತೆ ಇತ್ತು ಎಂದರೆ ಸರಿ. ಸದ್ರಿ ರಸ್ತೆಯು ಮೊದಲು ಪಂಚಾಯತ್ ರಸ್ತೆಯಾಗಿದ್ದು ಈಗ ಲೊಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿರುತ್ತದೆ ಎಂದರೆ ಇರಬಹುದು. ಸದ್ರಿ ರಸ್ತೆಯು ಮೊದಲು 8 ಫೂಟ್ ಅಗಲದ ರಸ್ತೆಯಾಗಿದ್ದು, ಈಗ 10 ಫೂಟ್ ಅಗಲದ ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ. ಮೊದಲು ಇದ್ದ ಹಾಗೆಯೇ ಇರುತ್ತದೆ. ನಾನು ಹೇಳುವಂತಹ ಸರ್ವೇ ನಂಬರ 7ಬ ರಲ್ಲಿರುವ ಜಾಗವು ಸದ್ರಿ ರಸ್ತೆ ಮತ್ತು ರಸ್ತೆಯ ಮಾರ್ಜಿನ್ ಗೆ ಹೋಗಿ ಉಳಿದ ಭಾಗ ದಾವಾ ಕಟ್ಟಡ ಇರುವ ಕಾಂಪ್ಲೆಕ್ಸ್ ನ ದಕ್ಷಿಣ ಭಾಗದಲ್ಲಿ ಬರುತ್ತದೆ ಎಂದರ ಸರಿಯಲ್ಲ.

4. ನಿಡಿ–3 ನಕ್ಷೆಯು ಅಧಿಕೃತ ನಕ್ಷೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 7ಬ ಮತ್ತು ಸರ್ವೇ ನಂಬರ 7ಅ/14 ಜಾಗವು ಬಿನ್ ಶೆತ್ಗಿ ಜಾಗ ಆಗಿರುವುದರಿಂದ ಅದಕ್ಕೆ ಲೆಔಟ್ ನಕ್ಷೆ ಮುಖ್ಯವಾಗಿರುತ್ತದೆ ಎಂದರೆ ಹೌದು. ವಾದಿಯವರು ದಾವಾ ಕಟ್ಟಡ ಖರೀದಿ ಮಾಡಿದ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದರೆ ಸಾಕಷ್ಟು ಸಮಯ ತೆಗೆದುಕೊಂಡು ಹೌದು ಎಂದು ಉತ್ತರಿಸಿ ಮತ್ತೇ ಸ್ವಲ್ಪ ಸಮಯ ಕಳೆದು ದಾವಾ ಕಟ್ಟಡ ವಾದಿಯವರು ಖರೀದಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

5. ನನ್ನ ಮತ್ತು ವಾದಿ ಸಂಸ್ಥೆಯ ನಡುವೆ ದಾವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಬಾಡಿಗೆಯ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ದಾವಾ ಕಟ್ಟಡಕ್ಕೆ ಸಂಬಂಧಿಸಿದಂತೆ ನಾಲ್ಕು ಲಕ್ಷ ರೂಪಾಯಿಗಳನ್ನು ವಾದಿಯವರಿಗೆ ಮುಂಗಡವಾಗಿ ನೀಡಿರುತ್ತೇನೆ ಎಂದರೆ ಹೌದು. ಸದ್ರಿ ಮುಂಗಡ ಹಣವನ್ನು ಯಾವುದೇ ಮಾತುಕತೆ ಮಾಡದೇ ವಾದಿಯವರಿಗೆ ನೀಡಿರುತ್ತೇನೆ. ಸಾಕ್ಷಿಯು ಸ್ವತಃ ಮುಂದುವರೆದು ಮಹೇಶ ಮುರ್ಡೇಶ್ವರ ಎಂಬ ವಾದಿ ಸಂಸ್ಥೆಯ ವ್ಯವಸ್ಥಾಪಕರು ಬಂದು ನಾವು ದಾವಾ ಕಟ್ಟಡವನ್ನು ಖರೀದಿ ಮಾಡಿದ್ದೇವೆ, ನೀವು ಇವತ್ತು ಮುಂಗಡ ಹಣ ನೀಡದೇ

ಇದ್ದಲ್ಲಿ ನಿಮ್ಮನ್ನು ಅಂಗಡಿಯಿಂದ ಖಾಲಿ ಮಾಡಿಸುತ್ತೇವೆ ಎಂದು ಹೇಳಿ ಯಾವುದೇ ದಾಖಲೆಗಳನ್ನು ತೋರಿಸದೇ ನಮ್ಮಿಂದ ಹಣ ತೆಗೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಸದ್ರಿ ಮಹೇಶ ಮುರ್ಡೇಶ್ವರರವರ ಜೊತೆ ಡಿ ಎಲ್ ನಾಯ್ಕ ಎಂಬ ಪ್ರಧಾನ ವ್ಯವಸ್ಥಾಪಕರು ಬಂದಿದ್ದರು. ಅವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಮ್ಮ ಬಳಿ ಬಂದಿರುವುದಿಲ್ಲ. ವಾದಿ ಸಂಸ್ಥೆಯ ಯಾರೊಬ್ಬರೂ ಸಹ ದಾವಾ ಕಟ್ಟಡದಿಂದ ಹೊರಗೆ ಹಾಕುತ್ತೇವೆ ಎಂದು ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ. ಈ ವಿಚಾರವನ್ನು ಪ್ರತಿವಾದ ಪತ್ರ ದಾಖಲಿಸುವಾಗ ವಕೀಲರಿಗೆ ಹೇಳಿದ್ದೆನೋ ಇಲ್ಲವೋ ಎಂದು ನನಗೀಗ ನೆನಪಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಈ ಮೇಲೆ ಹೇಳಿದಂತೆ ವಾದಿ ಸಂಸ್ಥೆಯ ವ್ಯವಸ್ಥಾಪಕರು ದಾವಾ ಕಟ್ಟಡ ಖರೀದಿ ಮಾಡಿದ್ದೇವೆ ಎಂದು ಹೇಳಿದ ನಂತರ ಆ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ವಾದಿ ಸಂಸ್ಥೆಯವರು ನಾನು ನಾಲ್ಕು ಲಕ್ಷ ರೂಪಾಯಿ ನೀಡಿದ ನಂತರ ಕರಾರು ಪತ್ರ ಮಾಡಿಕೊಂಡು ಬಂದಿರುತ್ತಾರೆ ಆದರೆ ಸದ್ರಿ ಕರಾರಿನಲ್ಲಿ ಬರೆದ ಸರ್ವೇ ನಂಬರಿಗೂ ಮಹಮ್ಮದ ಜಿಫ್ರಿಯವರು ನಮಗೆ ನೀಡಿದ ದಾವಾ ಕಟ್ಟಡದ ಸರ್ವೇ ನಂಬರಿಗೂ ತಾಳೆಯಾಗಿರುವುದಿಲ್ಲ ಹಾಗಾಗಿ ಅದಕ್ಕೆ ನಾನು ಸಹಿ ಮಾಡಿರುವುದಿಲ್ಲ. ಆ ರೀತಿ ಬಾಡಿಗೆ ಕರಾರು ಪತ್ರವನ್ನು ಮಾಡಿಕೊಂಡು ಬಂದಿದ್ದರು. ಸದ್ರಿ ಬಾಡಿಗೆ ಕರಾರು ಪತ್ರದಲ್ಲಿ ಎಷ್ಟು ಬಾಡಿಗೆ ಮತ್ತು ಮುಂಗಡ ಹಣ ನಾಲ್ಕು ಲಕ್ಷ ರೂಪಾಯಿಗಳ ಬಗ್ಗೆ ಬರೆಯಲಾಗಿತ್ತು. ಅದರಲ್ಲಿ ಎರಡು ಅಂಗಡಿಗಳಿಗೆ ಸೇರಿ ತಿಂಗಳಿಗೆ ಹತ್ತು ಸಾವಿರ ರೂಪಾಯಿ ಬಾಡಿಗೆ ಎಂದು ಕಾಣಿಸಲಾಗಿತ್ತು. ನಾನು ನಾಲ್ಕು ಲಕ್ಷ ರೂಪಾಯಿಗಳನ್ನು ವಾದಿಯವರಿಗೆ ನೀಡಿದ ಕಾಲಕ್ಕೆ ಎರಡು ಅಂಗಡಿಗಳಿಗೆ ತಿಂಗಳಿಗೆ ಇಪ್ಪತ್ತು ಸಾವಿರ ರೂಪಾಯಿಗಳು ಬಾಡಿಗೆ ನೀಡುತ್ತೇನೆಂದು ಮತ್ತು ಬಾಡಿಗೆಯ ಅವಧಿ 11 ತಿಂಗಳು ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಅದನ್ನು ಒಪ್ಪಿಕೊಂಡು ನಾನು ನಾಲ್ಕು ಲಕ್ಷ ರೂಪಾಯಿಗಳನ್ನು ವಾದಿಯವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಬಾಡಿಗೆ ಕರಾರನ್ನು ಮಾಡಿಕೊಂಡು ಬರುತ್ತೇನೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಮಾತುಕತೆ ಆಗಿರುವುದಿಲ್ಲ. ಆದರೆ ಮಾತುಕತೆಯಂತೆ ಬಾಡಿಗೆ ಕರಾರನ್ನು ನಾನು ಮಾಡಿಕೊಡದೇ ಹಾಗೆ ಬಾಡಿಗೆಯನ್ನು ಪಾವತಿಸದೇ ವಾದಿಯವರನ್ನು ಸತಾಯಿಸುತ್ತಾ ಬಂದಿರುತ್ತೇನೆ ಎಂದರೆ ಸುಳ್ಳು.

ಫೆಬ್ರುವರಿ 2019 ರಿಂದ ಬಾಡಿಗೆ ಪಾವತಿಸಲು ನಾನು ಬಾಕಿ ಇರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಬಾಡಿಗೆ ಕೊಡಲು ಬಾಕಿ ಇರುವುದಿಲ್ಲ. ಹಾಗಾಗಿಯೇ ವಾದಿ ತನ್ನ ವಕೀಲರ ಮೂಲಕ ಬಾಡಿಗೆತನವನ್ನು ರದ್ದುಗೊಳಿಸಿ ನೋಟಿಸನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ನಾನು ನೀಡಿದ ನಾಲ್ಕು ಲಕ್ಷ ರೂಪಾಯಿ ಮುಂಗಡ ಹಣವನ್ನು ಬಾಕಿ ಬಾಡಿಗೆಗಾಗಿ ವಾದಿಯವರು ವಜಾ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ದಾವಾ ಕಟ್ಟಡವನ್ನು ವಾದಿಗೆ ಬಿಟ್ಟುಕೊಡಲು ಬಾಧ್ಯನಾಗಿರುತ್ತೇನೆ ಎಂದರ ಸರಿಯಲ್ಲ. ಅದೇ ರೀತಿ ಬಾಕಿ ಬಾಡಿಗೆ ನೀಡಲು ಬಾಧ್ಯನಾಗಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಬಾಡಿಗೆ ಹಣವನ್ನು ಮಹಮ್ಮದ ಸಲೀಂ ಜೆಫ್ರಿಯವರಿಗೆ ಪಾವತಿಸಿರುತ್ತೇನೆ. ಈ ದಾವೆ ದಾಖಲಿಸಿದ ನಂತರ 10-12 ಬಾರಿ ಬಾಡಿಗೆಯನ್ನು ಸದ್ರಿ ಮಹಮ್ಮದ ಸಲೀಂ ಜೆಫ್ರಿಯವರಿಗೆ ಪಾವತಿಸಿರುತ್ತೇನೆ. ಆ ರೀತಿ ಬಾಡಿಗೆ ಪಾವತಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ನಗದು ರೂಪದಲ್ಲಿ ಬಾಡಿಗೆ ಪಾವತಿಸಿರುತ್ತೇನೆ. ಒಂದು ಬಾರಿ ನೆಫ್ಟ್ ಮುಖಾಂತರ ಹಣ ಪಾವತಿಸಿರುತ್ತೇನೆ. ಸಾಕ್ಷಿಯು ಸ್ವಲ್ಪ ಸಮಯದ ನಂತರ ಮಹಮ್ಮದ ಸಲೀಂ ಜೆಫ್ರಿಯವರಿಗೆ ನೆಫ್ಟ್ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. ಆ ರೀತಿ ಯಾರಿಗೆ ನೆಫ್ಟ್ ಮುಖಾಂತರ ಹಣ ಪಾವತಿಸಿದ್ದೇನೆಂದು ಈಗ ನೆನಪಿಲ್ಲ. ಈ ರೀತಿ ಬಾಡಿಗೆ ಪಾವತಿಸಿದ ವಿಚಾರಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ.

6. ನಿಡಿ-1 ರಿಂದ 13 ದಾಖಲಾತಿಗಳಿಗೂ ದಾವಾ ಕಟ್ಟಡಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ -ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**